ಅದಕ್ಕವನು, “ಚಟ್ನಿ ಇಮ್ಯಾಜಿನ್ಡ್ ಸಾರ್, ಇಮ್ಯಾಜಿನ್ ಮಾಡ್ತ ಮಾಡ್ತ ತಿನ್ನಬೇಕು, ಅದೇ ಈ ದೋಸೆಯ ಮಜಾ,” ಎಂದ! ನನಗವನ ಜುಟ್ಟನ್ನು ಹಿಡಿದು ಚಚ್ಚಬೇಕೆನಿಸಿತು. ಆದರೆ ಅವನೇನು ಮಾಡಿಯಾನು ಪಾಪ?

“ಅಷ್ಟೇ ಗೊತ್ತು ಸಾರ್ ನನಗೆ. ಹೆಚ್ಚಿನ ಮಾಹಿತಿ ಬೇಕಾದರೆ ಗುರುಗಳನ್ನು ಕಳಿಸ್ತೇನೆ.”

“ಓಹೋ, ಇನ್ನು ಗುರುಗಳೊಬ್ಬರು ಇದ್ದಾರಾ?”

“ಎಂದರೆ ಮ್ಯಾನೇಜರರು.”

“ಅದರ ಅಗತ್ಯವಿಲ್ಲ, ನನಗೀಗ ಅರ್ಥವಾಗುತ್ತಿದೆ. ಸದ್ಯ ದೋಸೆಯಾದರೂ ಶೂನ್ಯವಾಗಿಲ್ಲ ತಾನೆ!”

“ಶೂನ್ಯ ದೋಸೆ ಅಂದರೆ ಉರುಟು ದೋಸೆ ಅಂತ ಸಾರ್.”

“ಸ್ವಲ್ಪ ಉಪ್ಪಿನಕಾಯಿ ಸಿಗಬಹುದೇ?” ಎಂದು ಕೇಳಿದೆ. “ಪಿಕ್ಲ್ ಎಕ್ಸ್ಟ್ರಾ ಆಗ್ತದೆ – ಮೇಂಗೋ ಮಿಸ್ಟೀಕ್ ಇದೆ. ಕೊಡಲಾ?” “ಸೋ ಬಿ ಇಟ್!” ಎಂದೆ. ತಂದುಕೊಟ್ಟ. “ಉದಕ ಫ್ರೀ,” ಎಂದ. “ಥ್ಯಾಂಕ್ಸ್,” ಎಂದೆ. “ಸ್ವಾಗತಂ,” ಎಂದ. ಶೂನ್ಯ ದೋಸೆ, ಮೇಂಗೋ ಮಿಸ್ಟೀಕ್ – ವಟು ಅದನ್ನು ಮಿಸ್ಟೇಕ್ ಎಂದು ಉಚ್ಚರಿಸಿದ್ದು ಸರಿಯಾಗೇ ಇತ್ತು ನನ್ನ ಹೊಟ್ಟೆ ಸೇರಿದುವು. ಮೇಲಿಂದ ಫ್ರೀ ಉದಕ.

ತುಲಸೀದಲದ ಜೊತೆ ಬಂದ ನನ್ನ ಒನ್ ಪ್ಲಸ್ ಒನ್ ಟೇಬಲಿನ ಬಿಲ್ ತೆತ್ತು ಹೊರಬಂದಾಗಲೇ ನನಗೆ ಗೊತ್ತಾಗ ತೊಡಗಿತ್ತು ಅಧ್ಯಾತ್ಮ ಈಟರಿಯ ಪ್ರಭಾವ. ಆದಷ್ಟೂ ಬೇಗ ಮನೆ ಸೇರಬೇಕೆನಿಸಿತು. ಆ ವೇಳೆಯಲ್ಲಿ ರಸ್ತೆಯಲ್ಲಿ ಆಟೋಗಳಿಗೆ ಬಹಳ ಡಿಮಾಂಡು. ಅಂತೂ ಒಂದನ್ನು ಹೊಕ್ಕು ಕುಳಿತೆ. “ಎಲ್ಲಿಗೆ ಸಾರ್,” ಎಂದ ಚಾಲಕ. “ಮನೆಗೆ,” ಎಂದೆ.

“ಎಲ್ಲಿದೆ ನಿಮ್ಮ ಮನೆ?” ಎಂದ.

“ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ,” ಎಂದೆ.

ನಾನು ಅಧ್ಯಾತ್ಮದ ಗುಂಗಿನಲ್ಲಿರುವುದನ್ನು ಅವನೇನು ಬಲ್ಲ?

“ಇಳೀರಿ ಸ್ವಾಮಿ,” ಎಂದ ಒರಟಾಗಿ. “ನಿಮ್ಮಂಥವರ ಜತೆ ಏಗಾಡೋದಕ್ಕೆ ನನಗೆ ಸಮಯ ಇಲ್ಲ, ಇಳೀತೀರೋ ಇಲ್ಲಾ ಇಳಸಿಬೇಕೋ...”

ಇಳಿದೆ. ಇನ್ನೊಂದು ಆಟೊಕ್ಕೆ ಕಾದೆ.

## ಕೆ.ವಿ. ತಿರುಮಲೇಶ್

ಕವಿ, ಕತೆಗಾರ ತಿರುಮಲೇಶ್ ಕಾಸರಗೋಡಿನ ಕಾರಡ್ಕದವರು. ಸುಮಾರು ಐದು ದಶಕಗಳ ಕಾಲ ಕವಿತೆ, ಕತೆ, ವಿಮರ್ಶೆ, ಭಾಷೆ ಹಾಗೂ ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಬಂದಿದ್ದಾರೆ. 'ಮುಖಾಮುಖಿ'. 'ಅನೇಕ', 'ಅವಧ', 'ಪಾಪಿಯೂ'. 'ಅಕ್ಷಯ ಕಾವ್ಯ' ಅವರ ಕವನಸಂಗ್ರಹಗಳು. ಇಂಗ್ಲಿಷ್ ಅಧ್ಯಾಪಕರಾಗಿ, ಭಾಷಾವಿಜ್ಞಾನಿಯಾಗಿ ಬಹುಕಾಲ ಕನ್ನಡನಾಡಿನ ಹೊರಗಿದ್ದುಕೊಂಡೇ ಬರೆದ ಅವರು ಪ್ರಸ್ತುತ ಹೈದರಾಬಾದಿನಲ್ಲಿ ನೆಲೆಸಿದ್ದಾರೆ.